

## ಮನೆಗೆ ಬಂದ ತೇಲುವ ಕಪ್ಪೆ

ಮಳೆ ಬರುತ್ತಿದ್ದ ವೇಳೆ ಮನೆಯ ಗೋಡೆಗೆ ಅಂಟಿಕೊಂಡು ಹಸಿರು ಬಣ್ಣದ ಕಪ್ಪೆಯೊಂದು ಬೆಳಗ್ಗೆಯಿಂದ ಆಕಾಶಕ್ಕೆ ಮುಖ ಮಾಡಿ ಕುಳಿತುಕೊಂಡಿತ್ತು. ಸಂಜೆಯ ವೇಳೆಗೆ ಅದನ್ನು ಗಮನಿಸಿದ ಬೆಕ್ಕುಗಳು ಅದರ ಬೆನ್ನತ್ತಿದ್ದವು. ಹಾಗೆಯೇ ಕಪ್ಪೆಯ ಬಗ್ಗೆ ಕುತೂಹಲ ಮೂಡಿತು. ಅದರತ್ತ ಸೂಕ್ಷ್ಮ ದೃಷ್ಟಿ ಹಾಯಿಸಿದಾಗ ಹಸಿರು ಬಣ್ಣದ ಬೆನ್ನು, ಬೆರಳುಗಳ ಮಧ್ಯೆ ಉದ್ದನೆಯ ಕೆಂಪು ಬಣ್ಣದ ಜಾಲಪೊರೆಯನ್ನು ಹೊಂದಿತ್ತು. ಕುತೂಹಲದಿಂದ ಈ ಬಗ್ಗೆ ಮಾಹಿತಿ ಸಂಗ್ರಹಿಸಿದಾಗ ಇದು ಮರ ಕಪ್ಪೆಗಳ ಜಾತಿಗೆ ಸೇರಿದ ಮಲಬಾರ್ ಗ್ಲೈಡಿಂಗ್ (ತೇಲುವ) ಕಪ್ಪೆ ಎನ್ನುವುದು ಗೊತ್ತಾಯಿತು.

ಸುಮಾರು 4 ಇಂಚುಗಳವರೆಗೆ ಬೆಳೆಯುವ ಇದು ಮೇಲಿನಿಂದ 10–12 ಮೀಟರ್‌ನಷ್ಟು ದೂರ ಒಂದು ಮರದಿಂದ ಇನ್ನೊಂದು ಮರಕ್ಕೆ ಪ್ಯಾರಚೂಟ್ ರೀತಿ ತೇಲುತ್ತಾ ಮರದಲ್ಲಿ ತಳವೂರುವ ಸಾಮರ್ಥ್ಯ ಹೊಂದಿದೆ. ಹೆಣ್ಣು ಕಪ್ಪೆ ಗಂಡಿಗಿಂತ ದೊಡ್ಡದಾಗಿರುತ್ತದೆ. ಇವು ಮರ, ಕೊಂಬೆಗಳಲ್ಲಿ ಸಂತಾನೋತ್ಪತ್ತಿ ಮಾಡುತ್ತವೆ. ಗಂಡುಕಪ್ಪೆಗಳು ಉತ್ಪಾದಿಸುವ ದ್ರವವನ್ನು ಬಳಕೆ ಮಾಡಿ ಹೆಣ್ಣು ನೊರೆಗೂಡನ್ನು ಕಟ್ಟುತ್ತದೆ. ಭ್ರೂಣಗಳು ನೊರೆಗೂಡಲ್ಲಿ ಬೆಳೆದು ಮೊಟ್ಟೆಗಳು ನೀರಿಗೆ ಬಿದ್ದು ಕಪ್ಪೆಯಾಗಿ ಬದಲಾವಣೆ ಹೊಂದುತ್ತವೆ. ಇವುಗಳು ಸಾಮಾನ್ಯವಾಗಿ ಪಶ್ಚಿಮ ಘಟ್ಟದಲ್ಲಿ ಕಾಣಬಹುದು.

**–ಅರುಣ್ ಕಿಲ್ಲೂರು**





## ಕರಗದಂತಿರುವ ಕೀರ್ತಿ ಮುಖಗಳು

ಕರಗದಂತೆ ಒಂದರ ಮೇಲೊಂದು ನಿಂತಿರುವಂತೆ ಕಾಣುವ ಈ ಗೋಪುರವು ಚಿಕ್ಕಮಗಳೂರಿನಿಂದ ಕೇವಲ 57 ಕಿಲೋಮೀಟರ್ ದೂರದಲ್ಲಿರುವ ಅಮೃತೇಶ್ವರ ದೇವಸ್ಥಾನದ್ದು. ಬೇಲೂರು–ಹಳೆಬೀಡಿನಂತೆಯೇ ಹೊಯ್ಸಳ ಮಾದರಿಯ ಸುಂದರ ವಾಸ್ತುಶಿಲ್ಪವಿದ್ದರೂ ಬೇಲೂರು–ಹಳೆಬೀಡಿನಷ್ಟು ಪ್ರಸಿದ್ಧಿಗೊಂಡಿಲ್ಲ. ದೇವಸ್ಥಾನದ ಒಳಗೆ ಹೊಳೆಯುವ ಕಲ್ಲಿನಲ್ಲಿ ಕೆತ್ತಿದ ಸುಂದರ ಕಂಬಗಳಿದ್ದು, ಮಂಟಪಕ್ಕೆ ಸೇರಿದಂತಿರುವ ಗರ್ಭಗುಡಿಯಲ್ಲಿರುವ ಅಮೃತೇಶ್ವರ ಲಿಂಗಕ್ಕೆ ಈಗಲೂ ಪೂಜೆ ನಡೆಯುತ್ತದೆ. ಒಂದೇ ಗೋಪುರವಿರುವ ಕಾರಣಕ್ಕೆ ಏಕಕೂಟ ವಿನ್ಯಾಸದ ದೇಗುಲ ಎಂದೂ ಕರೆಯಲಾಗುತ್ತದೆ.

ಗೋಪುರದ ಬಳಿ ಹೊಯ್ಸಳರ ರಾಜ್ಯ ಲಾಂಛನವಾದ ಸಳನು ಸಿಂಹದೊಂದಿಗೆ ಯುದ್ಧ ಮಾಡುತ್ತಿರುವ ಭಗ್ನ ಶಿಲ್ಪವನ್ನು ನೋಡಬಹುದು. ದೇವಸ್ಥಾನದ ಹೊರ ಭಾಗದಲ್ಲಿ ರಾಮಾಯಣ ಭಾಗವತದ ಕಥೆಗಳ ಸುಂದರ ಉಬ್ಬುಶಿಲ್ಪಗಳಿವೆ. ಬೇರೆ ದೇವಸ್ಥಾನದಲ್ಲಿ ಕಾಣದಿರುವ ಗೋಪುರಾಕೃತಿಯು ಇಲ್ಲಿಯ ಹೊರ ಗೋಡೆಯನ್ನು ಅಲಂಕರಿಸಿದೆ. ಪ್ರಾಕಾರದಲ್ಲಿ ಒಂದೆರಡು ವೀರಗಲ್ಲುಗಳೂ ಹಾಗೂ ಕ್ರಿ.ಶ. 1996 ರ ಜನ್ನ ಕವಿಯ ಕಾವ್ಯವನ್ನು ಒಳಗೊಂಡಿರುವ ಹಳೆಗನ್ನಡದ ಶಾಸನವೂ ಇದೆ.

**–ಅಂಬಿಕಾ ಆರ್, ಬೆಂಗಳೂರು**

### ನೀವೂ ಬರೆಯಿರಿ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly